**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.**

| | |
|---|---|
| ಸಿ.ಸಿ. ನಂಬರ್ | : 08/2022 |
| ಸಿ.ಡಬ್ಲೂ | : 04 |
| ಪಿ.ಡಬ್ಲೂ | : 04 |
| ಸಾಕ್ಷಿಯ ಹೆಸರು | : ರುಖಿಯಾ ಬಂದೇನವಾಜ್ ಕಮತಗಿ |
| ವಯಸ್ಸು | : 32 ವರ್ಷ |
| ಉದ್ಯೋಗ | : ಮನೆಗೆಲಸ |
| ವಾಸ ಸ್ಥಳ | : ನವಲಗುಂದ |

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 31.10.2025.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿತರ ಪರಿಚಯ ಇದೆ. ಚಾಸಾ-1 ರವರು ನನ್ನ ತಾಯಿ. ಚಾಸಾ-5 ನನ್ನ ಸಹೋದರ. ಚಾಸಾ-6 ನನ್ನ ಸಂಬಂಧಿಕರು ಚಾಸಾ-7 ರಿಂದ ಚಾಸಾ-9 ರವರ ಪರಿಚಯವಿದೆ.

ಈಗ ಅಂದಾಜು 10 ವರ್ಷಗಳ ಹಿಂದೆ ನಾವು ಆರೋಪಿತರ ಮನೆಯಲ್ಲಿ ಲಾವಣಿಯ ಆಧಾರದಲ್ಲಿದ್ದು, 1 ನೇ ಆರೋಪಿ ಆಗಾಗ ನಮ್ಮ ಹತ್ತಿರ ಹಣ ಪಡೆದುಕೊಂಡು ಹೋಗುತ್ತಿದ್ದರು. ಒಂದು ದಿನ ನಾನು ಹೆರಿಗೆಗೆಂದು ನಮ್ಮ ಬಂದಿದ್ದು, ಆಗ 1 ನೇ ಆರೋಪಿ ನಾವು ವಾಸವಿರುವ ಮನೆಗೆ ಬಂದು ಹಣ ಕೇಳಿದ್ದು, ನಾನು ಆರೋಪಿಗೆ ಹಣ ಕೊಡಬೇಡ ಎಂದು ಚಾಸಾ-1 ರವರಿಗೆ ತಿಳಿಸಿರುತ್ತೇನೆ. ಆಗ 2 ನೇ ಆರೋಪಿ ನಮ್ಮ ಮನೆಗೆ ಬಂದು ಬಡಿಗೆಯಿಂದ ನನ್ನ ಹೊಟ್ಟೆಗೆ ಹೊಡೆದಿರುತ್ತಾರೆ. ಚಾಸಾ-1 ರವರಿಗೆ ಬಡಿಗೆಯಿಂದ 2 ನೇ ಆರೋಪಿ ಬಾಯಿಗೆ ಹೊಡೆದಿದ್ದು, ಆಕೆಯ ಹಲ್ಲುಗಳು ಬಿದ್ದಿರುತ್ತವೆ. ನಂತರ ಜಗಳ ಬಿಡಿಸಲು ಬಂದ ಚಾಸಾ-5 ರವರಿಗೆ ಕಟ್ಟಿಗೆಯಿಂದ ಆತನ ಹಲ್ಲಿಗೆ ಹೊಡೆದಿದ್ದು, ಆತನ ಹಲ್ಲು ಕಿತ್ತು ಹೋಗಿರುತ್ತದೆ. ನಂತರ ನಾವು ನವಲಗುಂದ ಪೊಲೀಸ ಠಾಣೆಗೆ ಹೋಗಿದ್ದು, ನಂತರ ಅಲ್ಲಿಂದ ನವಲಗುಂದ ಸರ್ಕಾರಿ ಆಸ್ಪತ್ರೆಗೆ

ದಾಖಲಾಗಿದ್ದು, ಅಲ್ಲಿಂದ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ದಾಖಲಾಗಿರುತ್ತೇವೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ. ರವರಿಂದಃ**

ಸದರಿ ಘಟನೆಯು ದಿಃ 25-10-2014 ರಂದು ಬೆ.08.00 ಗಂಟೆಗೆ ಆಗಿರುತ್ತದೆ ಎಂದರೆ ಸರಿ. ಆರೋಪಿತರು ನಮಗೆ ಸದರಿ ದಿನ ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿ. ನಂತರ ಆರೋಪಿತರು ನಮಗೆ ಜೀವ ಬೆದರಿಕೆ ಹಾಕಿತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಎಸ್ ಎಂ ಎಚ್ ವಕೀಲರಿಂದಃ**

ನನ್ನನ್ನು ಬಾಗಲಕೋಟೆಯ ವ್ಯಕ್ತಿಗೆ 2013 ರಲ್ಲಿ ವಿವಾಹ ಮಾಡಿ ಕೊಡಲಾಗಿದೆ. ಮದುವೆಯ ನಂತರ ನಾನು ಅಲ್ಲಿಯೇ ವಾಸವಿದ್ದೇನೆ. ನಾನು ಮದುವೆಯಾದ 6 ತಿಂಗಳ ನಂತರ ತವರು ಮನೆಗೆ ಬಂದಿದ್ದೆ. ನಮ್ಮ ಸ್ವಂತ ಮನೆ ನವಲಗುಂದದ ಬಸ್ತಿ ಓಣಿಯಲ್ಲಿ ಇರುತ್ತದೆ. ನಾನು 8 ತಿಂಗಳ ಗರ್ಭಿಣಿ ಇದ್ದಾಗ ಮನೆಗೆ ಬಂದಿದ್ದೆ. ನಾನು ನಿರಂತರವಾಗಿ ಆಸ್ಪತ್ರೆಗೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದೆ ಎಂದರೆ ಸರಿ. ನಾನು ಗರ್ಭಿಣಿ ಇದ್ದ ಬಗ್ಗೆ ಪೋಲೀಸರಿಗೆ ದಾಖಲೆಗಳನ್ನು ನೀಡಿರುತ್ತೇನೆ. ಸದರಿ ದಾಖಲೆಗಳನ್ನು ಪೋಲೀಸರಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಕಿಮ್ಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆಗಳನ್ನು ನೀಡಿರುತ್ತೇನೆ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಲಾವಣಿ ಆಧಾರದಲ್ಲಿ ಮನೆ ನೀಡಿದ್ದ ಬಗ್ಗೆ ದಾಖಲೆಗಳು ಇವೆ. ಸದರಿ ದಾಖಲೆಗಳನ್ನು ಪೋಲೀಸರಿಗೆ ನೀಡಿರಬಹುದು. ನಾವು ಸದರಿ ಮನೆಯಲ್ಲಿ ವಾಸವಿದ್ದ ಬಗ್ಗೆ ದಾಖಲೆಗಳನ್ನು ನೀಡಿರುವುದಿಲ್ಲ. ಸದರಿ ಮನೆ ನಮಗೆ ಬೇಕು ಎಂದು ಬರೆದುಕೊಡುವಂತೆ ನಾವು ಆಗಾಗ ಆರೋಪಿತರಿಗೆ ಕೇಳುತ್ತಿದ್ದೇವು ಎಂದರೆ ಸರಿಯಲ್ಲ. ಆರೋಪಿತರ ಮನೆಯ ಸುತ್ತು ಮುತ್ತ ಜೈನ್ ಬಸದಿಗಳು ಹಾಗೂ ಮನೆಗಳು ಇವೆ ಎಂದರೆ ಸರಿ. ಸದರಿ ಬಸದಿಗಳ ಸುತ್ತ ಮುತ್ತ ಇರುವವರು ಬೆಳಗಿನ ಸಮಯದಲ್ಲಿ ಪೂಜೆಗಾಗಿ ಅಲ್ಲಿಗೆ ಬರುತ್ತಾರೆ ಎಂದರೆ ಸರಿ. ಚಾಸಾ-6 ರಿಂದ 9 ರವರ ಮನೆಗಳು ನಮ್ಮ ಮನೆಯ ಹತ್ತಿರ ಇರುತ್ತವೆ. ಸದರಿಯವರ ಮನೆಗಳು ಬಸ್ತಿ ಓಣಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ

ಆರೋಪಿ ನಮ್ಮ ಮನೆಗೆ ಬೆ.09.00 ಗಂಟೆಗೆ ಬಂದಿದ್ದರು. ಸದರಿಯವರು ಬಂದು ನಮ್ಮ ಜೊತೆ ಮನೆಯ ಹೊರಗಡೆ ಅಂದಾಜು ಅರ್ಧ ಗಂಟೆಯವರೆಗೆ ಮಾತುಕತೆ ಮಾಡಿರುತ್ತಾರೆ. ಆಗ ಸಾಕಷ್ಟು ಜನರು ಸೇರಿದ್ದರು ಎಂದರೆ ಸರಿ. ಸದರಿಯವರೆಂದರೆ ಚಾಸಾ-6 ರಿಂದ 9 ರವರು ಆಗಿದ್ದು, ಉಳಿದವರ ಬಗ್ಗೆ ನನಗೆ ಗೊತ್ತಿಲ್ಲ. ಸರ್ಕಾರದಿಂದ ಚಾಸಾ-1 ರವರಿಗೆ 2013 ರಲ್ಲಿ ನಿವೇಶನ ಮಂಜೂರಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದನ್ನು ನನ್ನ ಅಕ್ಕನ ಮದುವೆಯ ಸಮಯದಲ್ಲಿ ಮಾರಾಟ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ. ಗುಡ್ಡದಕೇರಿಯ ಓಣಿಯಲ್ಲಿ ನಮಗೆ ಸಂಬಂಧಿಸಿ ಸ್ವಂತ ಮನೆ ಇರುತ್ತದೆ ಎಂದರೆ ಸರಿಯಲ್ಲ.

2. 2 ನೇ ಆರೋಪಿ ಹುಬ್ಬಳ್ಳಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. 2014 ರಲ್ಲಿ ಸದರಿಯವರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 2 ನೇ ಆರೋಪಿ ಚಾಸಾ-1 ರವರಿಗೆ ಬೈದಿದ್ದು, ಆದರೆ 2 ನೇ ಆರೋಪಿಯ ಹೆಸರು ನನಗೆ ಗೊತ್ತಿಲ್ಲ. ಸದರಿ ಘಟನೆ 1 ಗಂಟೆಗಳ ಅವಧಿಯವರೆಗೆ ನಡೆದಿರುತ್ತದೆ. ಘಟನೆಯಾದ ಅರ್ಧ ಗಂಟೆಗಳಲ್ಲಿ ಪೋಲೀಸರು ಬಂದು ವಿಚಾರಣೆ ಮಾಡುತ್ತಾರೆ ಎಂದರೆ ಸರಿ. 1 ನೇ ಆರೋಪಿ ಮೊದಲಿಗೆ ಬಂದು ಹಣ ಕೇಳಿದಾಗ ಚಾಸಾ-1 ರವರು ಪೋಲೀಸ ಠಾಣೆಗೆ ಹೋಗಿ ತಿಳಿಸಿರುತ್ತಾರೆ. ಸದರಿಯವರು ಯಾವ ಸಮಯಕ್ಕೆ ಪೋಲೀಸ ಠಾಣೆಗೆ ಹೋಗಿರುತ್ತಾರೆ ಎಂದು ಹೇಳಲಾಗುವುದಿಲ್ಲ. ಸದರಿ ಘಟನೆ ಮುಗಿಯುವ ವೇಳೆ ಬೆ.11.00 ಗಂಟೆಯಾಗಿತ್ತು. ಚಾಸಾ-7 ರಿಂದ 9 ರವರು ಜಗಳ ಬಿಡಿಸಲು ಬಂದಿರುತ್ತಾರೆ. ಚಾಸಾ-6 ರಿಂದ 8 ರವರು ನನ್ನ ಸಂಬಂಧಿಕರು ಎಂದರೆ ಸರಿ. ಸದರಿಯವರು ನನಗೆ ಸಹಾಯ ಮಾಡಲು ಬರುತ್ತಾರೆ ಎಂದರೆ ಸರಿಯಲ್ಲ. ನಾವು ಪೋಲೀಸ ಠಾಣೆಗೆ ಹೋದಾಗ ಸಮಯ ಎಷ್ಟಾಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿಯವರು ಮೊದಲಿಗೆ ನಮಗೆ ಆಸ್ಪತ್ರೆಗೆ ಹೋಗಲು ತಿಳಿಸಿರುತ್ತಾರೆ. ಆಸ್ಪತ್ರೆಗೆ ಹೋದಾಗ ನಮ್ಮ ಜೊತೆಗೆ ಪೋಲೀಸರು ಬಂದಿರುವುದಿಲ್ಲ. ಪೋಲೀಸರು ನನ್ನ ಹೇಳಿಕೆ ಪಡೆದುಕೊಂಡ ಬಗ್ಗೆ ನನಗೆ ನೆನಪಿಲ್ಲ. 1 ನೇ ಆರೋಪಿಗೆ ಕಿವಿ ಕೇಳಿಸುವುದಿಲ್ಲ ಹಾಗೂ ಕಣ್ಣು ಕಾಣಿಸುವುದಿಲ್ಲ ಎಂದರೆ ಸರಿ. ಆರೋಪಿತರಿಂದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಹೊಡೆಬಡೆ ಮಾಡಿರುತ್ತಾರೆ, ಅವಾಚ್ಯವಾಗಿ

ಬೈದಿರುತ್ತಾರೆ ಹಾಗೂ ಜೀವದ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು 1 ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**